# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 544
2 ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು)
3 ಉತ್ತರಿಸುವ ದಿನಾಂಕ : 11-12-2025
4 ಉತ್ತರಿಸುವವರು : ಉಪ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯದಿಂದ ಪ್ರತಿ ನಿತ್ಯ ನಿರೀಕ್ಷಿತ ವಿದ್ಯುತ್ ಉತ್ಪಾದನೆ ಪ್ರಮಾಣ ಎಷ್ಟು; ಪ್ರಸ್ತುತ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗುತ್ತಿದೆ; 500 ಟನ್ ಸಾಮರ್ಥ್ಯದ ಯೂನಿಟ್ 350 ಟನ್ ಕಸವನ್ನಷ್ಟೇ ನಾಶಪಡಿಸುತ್ತಿರುವುದಕ್ಕೆ ಕಾರಣವೇನು; (ಸಂಪೂರ್ಣ ವಿವರ ನೀಡುವುದು) | • 11.5 ಮೆಗಾವ್ಯಾಟ್ ಸಾಮರ್ಥ್ಯ.<br>• ವಿನ್ಯಾಸದ ಪ್ರಕಾರ ನಿಗದಿತ 11.5 ಮೆಗವ್ಯಾಟ್ ವಿದ್ಯುತ್ ಉತ್ಪಾದಿಸಲು 1650Kcal/kg ನಿವ್ವಳ ಕ್ಯಾಲೋರಿಫಿಕ್ ಮೌಲ್ಯವಿರುವ 600 ಟನ್ ಘನತ್ಯಾಜ್ಯದ ಅವಶ್ಯಕತೆ ಇರುತ್ತದೆ. ಆದರೆ 3000 Kcal/kg ನಿವ್ವಳ ಕ್ಯಾಲೋರಿಫಿಕ್ ಮೌಲ್ಯವಿರುವ ಘನತ್ಯಾಜ್ಯವು ಸರಬರಾಜಾಗುತ್ತಿದ್ದು ಪೂರ್ಣ ಪ್ರಮಾಣದ ಉತ್ಪಾದನೆಗೆ 300 ರಿಂದ 350 ಟನ್ ಘನತ್ಯಾಜ್ಯ ತ್ಯಾಜ್ಯವು ಸಾಕಾಗುತ್ತದೆ. |
| ಆ) | ಘಟಕವು ದಿನನಿತ್ಯ ಉತ್ಪಾದಿಸಬೇಕಾಗಿದ್ದ ವಿದ್ಯುತ್ ಪ್ರಮಾಣಕ್ಕೆ ಹೋಲಿಸಿದರೆ ಪ್ರತಿ ದಿನ ಎಷ್ಟು ಮೆಗಾವಾಟ್ ವಿದ್ಯುತ್ ಕೊರತೆ ಉಂಟಾಗುತ್ತಿದೆ; (ಸಂಪೂರ್ಣ ವಿವರ ನೀಡುವುದು) | • ಸ್ವೀಕರಿಸಿದ ಇಂಧನ (RDF) ವಿಭಿನ್ನ ಕ್ಯಾಲೋರಿಫಿಕ್ ಮೌಲ್ಯ ಹೊಂದಿದ ಸಂದರ್ಭದಲ್ಲಿ ಸ್ಥಾವರದಲ್ಲಿ 85-90% ಸಾಮರ್ಥ್ಯದಂತೆ ವಿದ್ಯುತ್ ಉತ್ಪಾದನೆಯನ್ನು ಮಾಡಲಾಗುತ್ತದೆ. |
| ಇ) | ಈ ಘಟಕದ ನಿರ್ಮಾಣಕ್ಕೆ ಹಾಗೂ ನಿರ್ವಹಣಾ ಈವರೆಗೆ ಖರ್ಚು ಮಾಡಿದ ಮೊತ್ತ ಎಷ್ಟು; ವಿದ್ಯುತ್ ಉತ್ಪಾದನಾ ಘಟಕಕ್ಕೆ ಆಗುತ್ತಿರುವ ವಾರ್ಷಿಕ ನಿರ್ವಹಣಾ ವೆಚ್ಚ ಎಷ್ಟು; ಆಗುತ್ತಿರುವ ವಿದ್ಯುತ್ ಉತ್ಪಾದನೆಗೆ ಹೋಲಿಕೆ ಮಾಡಿದಲ್ಲಿ ವ್ಯತ್ಯಾಸ ಎಷ್ಟು; ಗುರಿ ಸಾಧನೆಯಾಗದ ಕಾರಣ ಸರ್ಕಾರಕ್ಕೆ ಉಂಟಾಗುತ್ತಿರುವ ಆರ್ಥಿಕ ನಷ್ಟ ಎಷ್ಟು; (ಸಂಪೂರ್ಣ ವಿವರ ನೀಡುವುದು) | • ಸ್ಥಾವರಕ್ಕೆ ಉಂಟಾದ ವೆಚ್ಚವು ರೂ. 314.74 ಕೋಟಿಗಳು.<br>• ಬಿಡದಿ ತ್ಯಾಜ್ಯದಿಂದ ಇಂಧನ ಘಟಕದ ವಾರ್ಷಿಕ ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚ ರೂ. 28.38 ಕೋಟಿ.<br>• ಇಲಾಖೆ ನೌಕರರ ವೇತನ ಮತ್ತು ಇತರ ವೆಚ್ಚಗಳನ್ನು ಪರಿಗಣಿಸಿದರೆ, ಘಟಕವು ಯಾವುದೇ ನಷ್ಟ ಮತ್ತು ಲಾಭವಿಲ್ಲದೆ ನಡೆಯುತ್ತಿದೆ.<br>• ಪರಿಸರ ಸಂರಕ್ಷಣೆಗಾಗಿ ಸ್ಥಾಪಿಸಲಾಗಿರುವ ಈ ಘಟಕವನ್ನು ಲಾಭದಾಯಕ ಅಥವಾ ನಷ್ಟದಾಯಕವೆಂದು ನಿರ್ಧರಿಸಲಾಗುವುದಿಲ್ಲ. |

| | | |
|---|---|---|
| ಈ) | ಘಟಕದಲ್ಲಿ ಸಂಭವಿಸಿದ ಯಾಂತ್ರಿಕ/ತಾಂತ್ರಿಕ ದೋಷಗಳು ಎಷ್ಟು; ಕಳೆದ 3 ವರ್ಷಗಳಲ್ಲಿ ಈ ದೋಷಗಳನ್ನು ಸರಿಪಡಿಸಲು ಎಷ್ಟು ಬಾರಿ Shutdown ಮಾಡಲಾಗಿದೆ; ಇದರಿಂದ ಎಷ್ಟು ದಿನ ಉತ್ಪಾದನೆ ನಿಂತಿದೆ; (ವಿವರ ನೀಡುವುದು) | • ದಿನಾಂಕ: 30–11–2025 ರವರೆಗೆ ಯಾವುದೇ ಯಾಂತ್ರಿಕ / ತಾಂತ್ರಿಕ ದೋಷಗಳು ವರದಿಯಾಗಿಲ್ಲ. |
| ಉ) | ಘಟಕ ಓ&ಎಂ (Operations & Maintenance) ಗುತ್ತಿಗೆ ಪಡೆದಿರುವ ಕಂಪನಿ ಯಾವುದು; ಈ ಕಂಪನಿಯ ಕಾರ್ಯಕ್ಷಮತೆಯನ್ನು ಮೌಲ್ಯಾಂಕನ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | • ನೋಯ್ಡಾದ M/s. ಐಎಸ್‌ಜಿಇಸಿ ಹೆವಿ ಎಂಜಿನಿಯರಿಂಗ್ ಲಿಮಿಟೆಡ್.<br>• ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಕಾರ್ಯಕ್ಷಮತೆಯ ಮೌಲ್ಯಮಾಪನ ಮಾಡಲು KPC-GPCL ನಿಯಮಾನುಸಾರ ವಿಧಾನವನ್ನು ಅನುಸರಿಸುತ್ತದೆ. |

**ನಅಇ 541 ಎಂಎನ್‌ವೈ 2025 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ